<u>ಜಿಲ್ಲಾಧಿಕಾರಿಗಳು ಗುಲ್ಬರ್ಗಾರವರ ನಡವಳಿಗಳು</u>

ವಿಷಯ : ಗುಲಬರ್ಗಾ ತಾಲೂಕಿನ ಕೆಸರಟಗಿ ಗ್ರಾಮದ ಸರ್ವೆ ನಂ. 51/1 ರಲ್ಲಿ 08–20 ಎಕರೆ ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆ ಸ್ಥಾಪನೆ ಸಲುವಾಗಿ ಕಾಯ್ದಿರಿಸುವ ಕುರಿತು.

ಉಲ್ಲೇಖ :
1. ಅರಕ್ಷಕ ಮಹಾ ನಿರ್ದೇಶಕರು, ಗೃಹ ರಕ್ಷಕದಳದ ಮಹಾ ಸಮಾದೇಷ್ಟರು, ಪೌರರಕ್ಷಾ ನಿರ್ದೇಶಕರು ಹಾಗು ಮಹಾ ನಿರ್ದೇಶಕರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಬೆಂಗಳೂರು ಇವರ ಪತ್ರ ಸಂ.ಎಸ್‌ಡಿಆರ್‌ಎಫ್/10/ಡಿಜಿಪಿ/2013–14 ದಿನಾಂಕ: 08.10.2013.
2. ಪೋಲಿಸ್ ಅಧೀಕ್ಷಕರು ಗುಲ್ಬರ್ಗಾ ಇವರ ಪತ್ರ ಸಂಖ್ಯೆ ಲೆಕ್ಕ/ಕಟ್ಟಡ–1/ ರಾವಿಸ್ಪಪ/ಗು/2013–14 ದಿನಾಂಕ:27.09.2013.
3. ಸಹಾಯಕ ಆಯುಕ್ತರು ಗುಲಬರ್ಗಾ ಇವರ ಪತ್ರ ಸಂ.ಕಂ.ಭೂಮಿ/109/2013–14 ದಿನಾಂಕ: 29.10.2013.
4. ತಹಸೀಲ್ದಾರರು ಗುಲಬರ್ಗಾ ಇವರ ಪತ್ರ ಸಂ.ಕಂ.ಭೂಮಿ/1೯1/2013–14. ದಿನಾಂಕ: 29.10.2013.
5. ಸರ್ಕಾರದ ಸುತ್ತೋಲೆ ಸಂ.ಆರ್‌ಡಿ/20/ಎಲ್‌ಜಿಪಿ/2008. ದಿನಾಂಕ: 08.08.2008.

---000---

ಪ್ರಸ್ತಾವನೆ :

ಸದರಿ ಪ್ರಕರಣದಲ್ಲಿ ಅರಕ್ಷಕ ಮಹಾ ನಿರ್ದೇಶಕರು, ಗೃಹ ರಕ್ಷಕದಳದ ಮಹಾ ಸಮಾದೇಷ್ಟರು, ಪೌರರಕ್ಷಾ ನಿರ್ದೇಶಕರು ಹಾಗು ಮಹಾ ನಿರ್ದೇಶಕರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಬೆಂಗಳೂರು ಇವರು ಗುಲ್ಬರ್ಗಾ ನಗರ ವ್ಯಾಪ್ತಿಯಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆ ಸ್ಥಾಪನೆಗಾಗಿ 10–00 ಎಕರೆ ಜಮೀನನ್ನು ಗುರುತಿಸಿ ತಮ್ಮ ಇಲಾಖೆಗೆ ಹಂಚಿಕೆ ಮಾಡುವಂತೆ ಕೋರಿರುತ್ತಾರೆ. ಹಾಗು ಉಲ್ಲೇಖಿತ (02) ರ ಮೂಲಕ ಪತ್ರ ಸಲ್ಲಿಸುತ್ತಾ ಹೊಸದಾಗಿ ರಾಜ್ಯ ವಿಪತ್ತು ಸ್ಪಂದನಾ ಪಡೆ ಸ್ಥಾಪಿಸಲು ಗುಲಬರ್ಗಾ ತಾಲೂಕಿನಲ್ಲಿ 15–00 ಎಕರೆ ಜಮೀನು ಮಂಜೂರಿ ಮಾಡುವಂತೆ ಪೋಲಿಸ್ ಅಧೀಕ್ಷಕರು ಗುಲ್ಬರ್ಗಾ ಇವರು ಕೋರಿರುತ್ತಾರೆ.

ಅದರಂತೆ ತಹಸೀಲ್ದಾರರು ಗುಲ್ಬರ್ಗಾ ಇವರು ಸೂಕ್ತ ದಾಖಲೆಗಳಾದ ಪಹಣಿ ಪತ್ರಿಕೆ, ಸ್ಕೆಚ್ ನಕಾಶೆ, ಚೆಕಲಿಸ್ಟ್, ಪಂಚನಾಮೆ, ವರದಿ ಹಾಗೂ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಸಹಾಯಕ ಆಯುಕ್ತರು ಗುಲ್ಬರ್ಗಾ ಇವರ ಮೂಲಕ ಸಲ್ಲಿಸಿರುತ್ತಾರೆ. ಸಹಾಯಕ ಆಯುಕ್ತರು ಗುಲ್ಬರ್ಗಾ ಇವರು ರಾಜ್ಯ ವಿಪತ್ತು ಸ್ಪಂದನಾ ಪಡೆ ಸ್ಥಾಪನೆಗಾಗಿ ಗುಲಬರ್ಗಾ ತಾಲೂಕಿನ ಕೆಸರಟಗಿ ಗ್ರಾಮದ ಸರ್ಕಾರಿ ಸ.ನಂ. 51/1 ರ 44–32 ಎಕರೆ ಸರ್ಕಾರಿ ಗಾಯರಾಣ ಜಮೀನಿನಲ್ಲಿ 08–20 ಎಕರೆ ಜಮೀನು ಮಂಜೂರು ಮಾಡಲು ಲಭ್ಯವಿದ್ದು, ಸದರಿ ಉದ್ದೇಶಕ್ಕಾಗಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಗುಲಬರ್ಗಾ ತಾಲೂಕಿನ ಕೆಸರಟಗಿ ಗ್ರಾಮದ ಸರ್ಕಾರಿ ಸ.ನಂ. 51/1 ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಒಟ್ಟು 44–32 ಎಕರೆ ಸರ್ಕಾರಿ ಗಾಯರಾಣ ಜಮೀನಿನಲ್ಲಿ 08–20 ಎಕರೆ ಜಮೀನು ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿನ ಪ್ರಕೃತಿ ವಿಕೋಪಗಳಿಗೆ(ಅತಿವೃಷ್ಟಿ, ಅಪಘಾತ, ಬೆಂಕಿ ಹಾಗೂ ಇತರೆ ) ತಕ್ಷಣವೇ ಸ್ಪಂದಿಸಿ ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ರಾಜ್ಯ ವಿಪತ್ತು ಸ್ಪಂದನಾ ಪಡೆಯ ಸ್ಥಾಪನೆಯು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಸರ್ಕಾರದ ಮಹತ್ವದ ಯೋಜನೆಯ ಜಾರಿಗೊಳಿಸುವ ಸದುದ್ದೇಶದಿಂದ ಸೂಕ್ತ ಹಾಗೂ ಸಮಂಜಸವೆಂದು ಕಂಡುಬಂದಿದ್ದು ರಾಜ್ಯ ವಿಪತ್ತು ಸ್ಪಂದನಾ ಪಡೆಯನ್ನು ಪ್ರಾರಂಭಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ನಿಯಮ 71 ರನ್ವಯ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗಳು ಕರ್ನಾಟಕ

Scanned with CamScanner

ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಗುಲ್ಬರ್ಗಾ ವಲಯ ಗುಲ್ಬರ್ಗಾ ಇವರ ಹೆಸರಿಗೆ ಕಾಯ್ದಿರಿಸಲು ಈ ಕೆಳಗಿನಂತೆ ಆದೇಶ.

ಸಂ.ಕಂ.ಭೂಮಿ-ಅ/186/2013-14 ದಿನಾಂಕ:30.10.2013.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ನನ್ನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಗುಲಬರ್ಗಾ ತಾಲೂಕಿನ ಕೆಸಟರಗಿ ಗ್ರಾಮದ ಸರ್ಕಾರಿ ಸ.ನಂ. 51/1 ರ 44-32 ಎಕರೆ ಸರ್ಕಾರಿ ಗಾಯರಾಣ ಜಮೀನಿನಲ್ಲಿ 08-20 ಎಕರೆ ಜಮೀನು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗಳು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಗುಲ್ಬರ್ಗಾ ವಲಯ ಗುಲ್ಬರ್ಗಾ ಇವರಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರನ್ವಯ ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ.

ಗುಲಬರ್ಗಾ ತಾಲೂಕಿನ ಕೆಸರಟಗಿ ಗ್ರಾಮದ ಸರ್ವೆ ನಂ. 51/1 ರ ಜಮೀನಿನಲ್ಲಿ ಕಾಯ್ದಿರಿಸಿದ 08-20 ಎಕರೆ ಜಮೀನಿನ ಚಕ್‌ಬಂದಿಯನ್ನು ಸ್ಕೆಚ ನಕಾಶೆಯಲ್ಲಿ ವಿವರಿಸಿದಂತೆ ಈ ಕೆಳಗಿನಂತೆ ನಿರ್ಧರಿಸಿದೆ.

ಚಕಬಂದಿ:

| ಸರ್ವೆ ನಂ. | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
|---|---|---|---|---|
| 51/1 | ಸರ್ವೆ ನಂ. 51 ರಲ್ಲಿ ಮಂಜೂರಿಸಿದ ಜಮೀನು | ಸರ್ವೆ ನಂ. 51/3 ರ ಜಮೀನು ಗುಲ್ಬರ್ಗಾದಿಂದ ಶಹಾಬಾದ ರಸ್ತೆ | ಸರ್ವೆ ನಂ. 51/3 ರ ಜಮೀನು ಹಾಗು ಸರ್ವೆ ನಂ. 51 ರಲ್ಲಿ ಮಂಜೂರಿಸಿದ ಜಮೀನು | ಸರ್ವೆ ನಂ. 50 ಹಾಗು 52 ರ ಜಮೀನು ಝೂಪೂರ ಗ್ರಾಮದ ಸೀಮೆ |

ಷರತ್ತುಗಳು :

1. ಪ್ರಸ್ತುತ ಜಮೀನು ಕೋರಿದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
2. ಮಂಜೂರಾತಿಯಾದ ಜಮೀನಿನ ಸುತ್ತಲು ಕಂಪೌಂಡ ಗೋಡೆಯನ್ನು ನಿರ್ಮಿಸಿಕೊಳ್ಳವದು.
3. ಮಂಜೂರು ಮಾಡಿದ ಜಮೀನು ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಂಡಲ್ಲಿ ಯಾವುದೇ ತರಹದ ಅವಕಾಶ ನೀಡದೆಯೇ ಸದರಿ ಜಮೀನು ಮರಳಿ ಕಂದಾಯ ಇಲಾಖೆಗೆ ಪಡೆದುಕೊಳ್ಳ ಲಾಗುವದು.

ಸಹಿ/-
(ಡಾ. ಎನ್.ವಿ. ಪ್ರಸಾದ್)
ಜಿಲ್ಲಾಧಿಕಾರಿಗಳು ಗುಲ್ಬರ್ಗಾ

ಪ್ರತಿಯನ್ನು :

1. ಅರಕ್ಷಕ ಮಹಾ ನಿರ್ದೇಶಕರು, ಗೃಹ ರಕ್ಷಕದಳದ ಮಹಾ ಸಮಾದೇಷ್ಟರು, ಪೌರರಕ್ಷಾ ನಿರ್ದೇಶಕರ ಕಚೇರಿ ನಂ. 1, ಅಣ್ಣಾಸ್ವಾಮಿ ಮೊದಲಿಯಾರ ರಸ್ತೆ ಬೆಂಗಳೂರು-042 ಇವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಪೋಲಿಸ್ ಅಧಿಕ್ಷಕರು ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗಳು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಗುಲ್ಬರ್ಗಾ ವಲಯ ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ಸಹಾಯಕ ಆಯುಕ್ತರು ಗುಲಬರ್ಗಾ ಇವರಿಗೆ ಮಾಹಿತಿಗಾಗಿ.
5. ತಹಸೀಲ್ದಾರರು ಗುಲಬರ್ಗಾ ಇವರಿಗೆ ಕೊಡುತ್ತ ಅನುಪಾಲನಾ ವರದಿ ಸಲ್ಲಿಸಲು ಕೋರಲಾಗಿದೆ.
6. ಕಡತಕ್ಕೆ.

DY. COMMISSIONER, GULBARGA

ಅಪರ ಜಿಲ್ಲಾಧಿಕಾರಿಗಳು
ಗುಲ್ಬರ್ಗಾ

Scanned with CamScanner